# ಶ್ರೀರಾಮಕೃಷ್ಣ ಮಠ, ಮೈಲಾಪುರ, ಚೆನ್ನೈ– 600 004

## ಶ್ರೀರಾಮಕೃಷ್ಣರ 175ನೇ ಜನ್ಮಜಯಂತಿ ಸಮಾರಂಭ

ಚೆನ್ನೈನಲ್ಲಿರುವ ಶ್ರೀರಾಮಕೃಷ್ಣ ಮಠವು ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಸಂಗಾತಿಯಾದ ಶ್ರೀಮಾತೆ ಶಾರದಾದೇವಿಯವರ ಭೇಟಿಯಿಂದ ಪುನೀತವಾದ ಪ್ರಮುಖ ಆಧ್ಯಾತ್ಮಿಕ ಕೇಂದ್ರವಾಗಿದೆ. ಶ್ರೀರಾಮಕೃಷ್ಣರ ಶಿಷ್ಯರಲ್ಲಿ ಒಬ್ಬರೂ, ಶ್ರೇಷ್ಠ ಆಧ್ಯಾತ್ಮಿಕ ಚೇತನವೂ ಆದ ಸ್ವಾಮಿ ರಾಮಕೃಷ್ಣಾನಂದರು ಈ ಮಠದ ಸಂಸ್ಥಾಪಕರು. ಹಾಗೆಯೇ ಶ್ರೀರಾಮಕೃಷ್ಣರ ಇನ್ನಿತರ ಹಲವಾರು ಪ್ರಮುಖ ಸಾಕ್ಷಾತ್ ಶಿಷ್ಯರುಗಳು ಕೂಡ ಈ ಮಠಕ್ಕೆ ಭೇಟಿಕೊಟ್ಟು ಇದನ್ನು ಪವಿತ್ರಗೊಳಿಸಿದ್ದಾರೆ.

2011–12 ನೆಯ ಇಸವಿಯಲ್ಲಿ ಶ್ರೀರಾಮಕೃಷ್ಣರ 175ನೇ ಜನ್ಮಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು, ಚೆನ್ನೈ ಶ್ರೀರಾಮಕೃಷ್ಣ ಮಠವು ನಿರ್ಧರಿಸಿದೆ. ಅದನ್ನು ಹಲವಾರು ಕಾರ್ಯಕ್ರಮಗಳ ಮೂಲಕ ಹಮ್ಮಿಕೊಳ್ಳುವಲ್ಲಿ ಈ ಮಠಕ್ಕೆ ತುಂಬ ಅಭಿಮಾನವಿದೆ. ಅಂತಹ ಒಂದು ಕಾರ್ಯಕ್ರಮವೆಂದರೆ, "ಮನೆಮನೆಯಲ್ಲಿ ಸತ್ಸಂಗ." ಈ ಮೂಲಕ ಆಧ್ಯಾತ್ಮಿಕ ಸಂದೇಶವನ್ನು ಭಕ್ತರ ಮನೆಗಳಿಗೆ ತಲುಪಿಸುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ. ಈ ಸತ್ಸಂಗಗಳನ್ನು ವಾರಕ್ಕೊಮ್ಮೆ, ಹದಿನೈದು ದಿನಗಳಿಗೆ ಒಮ್ಮೆ ಅಥವಾ ತಿಂಗಳಿಗೊಮ್ಮೆ, ಭಕ್ತರ ಅನುಕೂಲಕ್ಕೆ ಅನುಸಾರವಾಗಿ ನಡೆಸಲಾಗುವುದು. ಈಗಾಗಲೇ 200ಕ್ಕೂ ಹೆಚ್ಚು ಈ ಬಗೆಯ ಸತ್ಸಂಗಗಳನ್ನು ನಿಯೋಜಿಸಲಾಗಿದೆ.

ಈ ಮಹೋತ್ಸವದ ಸಮಾರೋಪ ಸಮಾರಂಭವು ಚೆನ್ನೈ ಮಠದಲ್ಲಿ ಫೆಬ್ರವರಿ 22ರಿಂದ 26 ರವರೆಗೆ ನಡೆಯಲಿದೆ. ಆ ಸಮಯದಲ್ಲಿ ಅನೇಕ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುವುದು. ಫೆಬ್ರವರಿ 2012ರಲ್ಲಿ, ಶ್ರೀರಾಮಕೃಷ್ಣರ 175ನೇ ಜನ್ಮಜಯಂತಿ ಮಹೋತ್ಸದ ಸಮಾರೋಪದ ಜೊತೆಗೆ, ಚೆನ್ನೈನಲ್ಲಿರುವ ಶ್ರೀರಾಮಕೃಷ್ಣರಿಗೆ ನಿವೇದಿತವಾದ ವಿಶ್ವಭಾವೈಕ್ಯ ದೇವಮಂದಿರವು ನಿರ್ಮಾಣವಾಗಿ 12 ವರ್ಷಗಳ ಕಳೆದ ಸಂದರ್ಭವೂ ಜೊತೆಗೂಡಿರುವುದು ಒಂದು ವೈಶಿಷ್ಟ್ಯ.

ಶ್ರೀರಾಮಕೃಷ್ಣರಿಗೆ ಮುಡಿಪಾದ ವಿಶ್ವಭಾವೈಕ್ಯ ದೇವಮಂದಿರ ಮತ್ತು ಅದರ ಪರಿಸರದಲ್ಲಿ ಸೂಕ್ತ ಕಟ್ಟಡ ದುರಸ್ತಿ ಕಾಮಗಾರಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕಾದ ಆವಶ್ಯಕತೆ ತುರ್ತಾಗಿ ಒದಗಿಬಂದಿದೆ. ಶ್ರೀರಾಮಕೃಷ್ಣರ 175ನೇ ಜನ್ಮಜಯಂತಿ ಮಹೋತ್ಸವವು ಅಂತಹ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಹಾಗೆಯೇ ಫೆಬ್ರವರಿ 2012 ರ ಹೊತ್ತಿಗೆ ಮಂದಿರವನ್ನು ಅದರ ಎಲ್ಲ ಮೆರಗಿನೊಂದಿಗೆ ಶ್ರೀರಾಮಕೃಷ್ಣರಿಗೆ ಪುನಃ ಸಮರ್ಪಣೆ ಮಾಡುವ ಸಂದರ್ಭ ಇದಾಗಿದೆ. ಈ ಕಾಮಗಾರಿಗಳಿಗೆ ತಗಲುವ ಖರ್ಚು ಒಟ್ಟು ರೂ.82 ಲಕ್ಷಗಳೆಂದು ಅಂದಾಜು ಮಾಡಲಾಗಿದ್ದು, ಅದರ ವಿವರಗಳು ಹೀಗಿವೆ:

| | | | |
|---|---|---|---|
| 1. | ಮಂದಿರದ ದುರಸ್ತಿ ಕಾಮಗಾರಿಗಳು | : | 7 ಲಕ್ಷ |
| 2. | ವಿಶ್ವಭಾವೈಕ್ಯ ಮಂದಿರಕ್ಕೆ ಬಣ್ಣಹಚ್ಚುಕಾಮಗಾರಿ | : | 6 ಲಕ್ಷ |
| 3. | ಹಳೆಯ ಮಂದಿರದ (100 ವರ್ಷಕ್ಕೂ ಹೆಚ್ಚಿನದು) ದುರಸ್ತಿ ಕಾಮಗಾರಿಗಳು | : | 17 ಲಕ್ಷ |
| 4. | ಹಳೆಯ ಮಂದಿರಕ್ಕೆ ಬಣ್ಣ ಹಚ್ಚುವ ಕಾಮಗಾರಿ | : | 3 ಲಕ್ಷ |
| 5. | ಮಠದ ಆವರಣದ ಸುತ್ತಲೂ ಕಾಂಪೌಂಡ್ ಗೋಡೆಯನ್ನು ರಿಪೇರಿ ಮಾಡುವ ಕಾಮಗಾರಿ | : | 8 ಲಕ್ಷ |
| 6. | ಮಠದ ಅಂಗಣದ ನೆಲ ಮತ್ತು ಕಾಲುದಾರಿಗಳನ್ನು ಹೊಸದಾಗಿ ಹಾಸುವ ಕಾಮಗಾರಿ | : | 22 ಲಕ್ಷ |
| 7. | ಇನ್ನಿತರೆ ಖರ್ಚುವೆಚ್ಚ | : | 4 ಲಕ್ಷ |
| 8. | ಜಯಂತಿಮಹೋತ್ಸವ | : | 12 ಲಕ್ಷ |
| | ಒಟ್ಟು | : | 82 ಲಕ್ಷ |

ಈ ದುರಸ್ತಿ ಕಾರ್ಯವನ್ನು ಕೈಗೊಳ್ಳುವುದಕ್ಕೆ ಧನಸಹಾಯವನ್ನು ಉದಾರವಾಗಿ ಮಾಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ. ಶ್ರೀರಾಮಕೃಷ್ಣರ 175ನೇ ಜಯಂತಿ ಮಹೋತ್ಸವದ ಈ ಪವಿತ್ರ ಸಂದರ್ಭದಲ್ಲಿ, ಅವರ ಅಡಿಯಲ್ಲಿ ನಮ್ಮನ್ನು ಪುನಃಸಮರ್ಪಿಸಿಕೊಳ್ಳುವ ಈ ಉದಾತ್ತ ಕೈಂಕರ್ಯದಲ್ಲಿ ದಯವಿಟ್ಟು ನಮ್ಮ ಜೊತೆಗೆ ಕೈಜೋಡಿಸಬೇಕೆಂದು ಪ್ರಾರ್ಥಿಸುತ್ತಿದ್ದೇವೆ.

'Sri Ramakrishna Math, Chennai' –ಈ ಹೆಸರಿಗೆ ಬರೆದ ಡಿ.ಡಿ. ಅಥವಾ ಚೆಕ್‌ಗಳನ್ನು ಕೆಳಗಿನ ವಿಳಾಸಕ್ಕೆ ಕಳಿಸಬಹುದು. ಆದಾಯ ತೆರಿಗೆ ಅಧಿನಿಯಮ 80– ಅನ್ವಯ ಎಲ್ಲ ದೇಣಿಗೆಗಳಿಗೂ ತೆರಿಗೆ ವಿನಾಯತಿಯ ಸೌಲಭ್ಯ ಇದೆ.

ಆನ್‌ಲೈನ್ ಮೂಲಕ ಕೂಡ ತಾವು ತಮ್ಮ ದೇಣಿಗೆಗಳನ್ನು ಕಳುಹಿಸಬಹುದು. ಅದಕ್ಕಾಗಿ 'Sri Ramakrishna 175 ವಿಭಾಗವನ್ನು ([illegible] ಆಯ್ಕೆ ಮಾಡಿಕೊಳ್ಳಿ. ಹಾಗೆಯೇ ನೇರ ಬ್ಯಾಂಕ್ ಟ್ರಾನ್ಸ್‌ಫರ್‌ಗೆ ಕೂಡ ಅವಕಾಶವಿದೆ. ಅದಕ್ಕಾಗಿ [illegible] ವಿವರಗಳಿಗೆ ದಯವಿಟ್ಟು ನಮ್ಮನ್ನು ಇ–ಮೈಲ್ ಮೂಲಕ ಸಂಪರ್ಕಿಸಿ.


ಶ್ರೀರಾಮಕೃಷ್ಣರ ಅನುಗ್ರಹ ನಮ್ಮೆಲ್ಲರ ಮೇಲೆ ಇರಲಿ ಎಂದು ಅವರನ್ನು ಪ್ರಾರ್ಥಿಸಿಕೊಳ್ಳುತ್ತಿದ್ದೇವೆ.

SRI RAMAKRISHNA MATH, MYLAPORE, CHENNAI-600004
PHONE: (044) 24621110; Email: mail@chennaimath.org;
Website: www.chennaimath.org

ಸ್ವಾಮಿ ಗೌತಮಾನಂದ
(ಅಧ್ಯಕ್ಷರು)

## ಸಂಪಾದಕೀಯ

# ಶ್ರೀರಾಮಕೃಷ್ಣರ ನಾಲ್ಕು ಮಹಾವಾಕ್ಯಗಳು



ಶ್ರೀರಾಮಕೃಷ್ಣರ ಬೋಧನೆಗಳ ಸಾರಸರ್ವಸ್ವ ಯಾವುದು? ಈ ಪ್ರಶ್ನೆ ಸ್ವಲ್ಪ ಕಠಿಣವಾದುದು. ಶ್ರೀರಾಮಕೃಷ್ಣರು ಯಾವ ಗ್ರಂಥವನ್ನೂ ಬರೆಯಲಿಲ್ಲ; ಯಾವ ಭಾಷಣವನ್ನೂ ನೀಡಲಿಲ್ಲ. ದೇವರೆಂಬುದು ಹೀಗೇ ಇರುತ್ತದೆ; ಅದನ್ನು ಹೀಗೆಯೇ ಪಡೆಯಬೇಕು ಎಂಬ ಕಟ್ಟುಪಾಡನ್ನು ಕೂಡ ಮಾಡಲಿಲ್ಲ. ತಮ್ಮ ಮನದಾಳದಿಂದ ಬಂದ ವಿಷಯಗಳನ್ನು ಶ್ರದ್ಧೆಯುಳ್ಳ ಭಕ್ತರಿಗೆ ಹೇಳುತ್ತಾ ಹೋದರು. ತಮ್ಮ ಹೃದಯದ ಭಾವನೆಗಳನ್ನು ತಮ್ಮ ಸುತ್ತಲೂ ನೆರೆಯುತ್ತಿದ್ದ ಭಾವುಕರೆದುರು ಬಿಚ್ಚಿಡುತ್ತ ಹೋದರು. ಈ ವಿಧಾನದಲ್ಲಿ ಗುರುದೇವರ ಇಂಗಿತಗಳು, ಅಭಿಪ್ರಾಯಗಳು ವಿಶಿಷ್ಟರೀತಿಯಲ್ಲಿ ಭಕ್ತರಿಗೆ ಅರ್ಥವಾಗುತ್ತ ಹೋದವು. ಭಕ್ತಜನರ ವ್ಯಕ್ತಿತ್ವದಲ್ಲಿ, ಆಲೋಚನಾವಿಧಾನದಲ್ಲಿ ಮತ್ತು ಅವರು ಮಾಡುತ್ತಿದ್ದ ಆಧ್ಯಾತ್ಮಿಕ ಸಾಧನೆಯಲ್ಲಿ ಶಾಂತವಾದ, ಆದರೆ ಪರಿಣಾಮಕಾರಿಯಾದ ಅಪೂರ್ವ ಪರಿವರ್ತನೆಯನ್ನು ಅವು ತರುತ್ತ ಹೋದವು. ಈ ಬೋಧನೆಗಳು ಗುರುದೇವರ ಹೃದಯದಾಳದಿಂದ ಮೂಡಿಬಂದು ಭಕ್ತರ ಹೃದಯಕ್ಕೆ ತಟ್ಟುತ್ತಿದ್ದ ಬಗೆಯನ್ನು ವರ್ಣಿಸಲಾಗದು. ಹಾಗೆಯೇ ಆ ಬೋಧನೆಗಳಿಗೆ ಯಾವುದೇ ತಾತ್ತ್ವಿಕ ಚೌಕಟ್ಟನ್ನು, ಮತೀಯ ಅಥವಾ ಧಾರ್ಮಿಕ ನಿರ್ದಿಷ್ಟತೆಯ ಪರಿಧಿಯನ್ನು ಹಾಕಲು ಸಾಧ್ಯವಿಲ್ಲ. ಸಾಂಪ್ರದಾಯಿಕ ಶಾಸ್ತ್ರೀಯ ಬೋಧನೆಗಳ ಹಾಗೆ **'ಇದಮಿತ್ಥಂ'** – ಇದೇ ಸರಿ, ಉಳಿದುದೆಲ್ಲ ಸುಳ್ಳು ಎಂಬ ಏಕವಾಕ್ಯತೆಯನ್ನು ತರಲೂ ಆಗುವುದಿಲ್ಲ. ಶ್ರೀರಾಮಕೃಷ್ಣರ ವ್ಯಕ್ತಿತ್ವವು ಹೇಗೆ ವಿಶ್ವವ್ಯಾಪಕವೋ, ಹಾಗೆಯೇ ಅವರ ಬೋಧನೆಯೂ ಉದಾರವಾದುದು; ಆಕಾಶದಂತೆ ಅನಂತ ಅರ್ಥವ್ಯಾಪ್ತಿ ಉಳ್ಳದ್ದು; ಸಾಗರದಂತೆ ನಿಗೂಢ ಮತ್ತು ಗಂಭೀರ ಸತ್ಯಗಳನ್ನು ತನ್ನಲ್ಲಿ ಹುದುಗಿಸಿಕೊಂಡಿರುವಂಥದ್ದು.

ಶ್ರೀರಾಮಕೃಷ್ಣರ ಉಪದೇಶಗಳಲ್ಲಿ ಕಂಡುಬರುವ ಮೂರು ಪ್ರಮುಖ ವೈಶಿಷ್ಟ್ಯಗಳು ಗಮನಾರ್ಹ: **೧. ಪ್ರಾಮಾಣಿಕತೆ ೨. ಅಧಿಕೃತತೆ** ಮತ್ತು **೩. ಪ್ರಾಯೋಗಿಕತೆ.** ಶ್ರೀರಾಮಕೃಷ್ಣರ ಉಪದೇಶಗಳೆಲ್ಲವೂ ಅವರ ಅನುಭವದ ಆಧಾರದ ಮೇಲೆ ನಿಂತಿವೆ. ಅವು ಸತ್ಯವೆಂದು ಅವರು ಈಗಾಗಲೇ ಕಂಡುಕೊಂಡಿದ್ದಾರೆ. ಹೀಗಾಗಿ ಅವು ಪ್ರಾಮಾಣಿಕ. ಅದೂ ಅಲ್ಲದೆ, ಶ್ರೀರಾಮಕೃಷ್ಣರೇ ತಮ್ಮ ಬೋಧನೆಗಳ ಪ್ರತ್ಯಕ್ಷ ನಿದರ್ಶನವಾಗಿದ್ದಾರೆ. ಹೀಗಾಗಿ ಅವು ಅಧಿಕೃತವಾಗಿವೆ. ಮೂರನೆಯದಾಗಿ, ಶ್ರೀರಾಮಕೃಷ್ಣರು ತಮ್ಮ ಜೀವನದಲ್ಲಿ ಪ್ರಾಯೋಗಿಕವಾಗಿ ಇವನ್ನು ಮಾಡಿ ತೋರಿಸಿದ್ದಾರೆ. ಬೇರೆಯವರು ಅಲ್ಪಪ್ರಮಾಣದಲ್ಲಿಯಾದರೂ, ಇವುಗಳನ್ನು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತರಲು ಸಾಧ್ಯ. ಹೀಗೆ ಅವು ಪ್ರಾಯೋಗಿಕವೂ ಆಗಿವೆ.

ಉಪನಿಷತ್ತುಗಳ ಸಿದ್ಧಾಂತವನ್ನೇ 'ವೇದಾಂತ'ವೆಂದು ಕರೆಯುವುದು. ಅಗಾಧವಾದ ಆ ಜ್ಞಾನರಾಶಿಯಲ್ಲಿ ನಾಲ್ಕು ಅಮೂಲ್ಯ ರತ್ನಗಳನ್ನು ಹಿಂದಿನ ಆಚಾರ್ಯರು ಹೆಕ್ಕಿಕೊಟ್ಟರು. ಅವುಗಳು ವೇದಾಂತದ ಸಾರಸರ್ವಸ್ವವನ್ನು ಪ್ರತಿಪಾದಿಸುತ್ತವೆ ಎಂದು ಘೋಷಿಸಿದರು. ನಾಲ್ಕು ವೇದಗಳಿಗೆ ಸೇರಿದ, ನಾಲ್ಕು ಉಪನಿಷತ್ತುಗಳಿಂದ ತೆಗೆದುಕೊಂಡ ಆ ವಾಕ್ಯಗಳನ್ನು 'ಮಹಾವಾಕ್ಯಗಳು' ಎಂದು ಕರೆದು ಪ್ರಾಮುಖ್ಯತೆಯನ್ನು ನೀಡಿದರು.

ಈ ವಿಧಾನವನ್ನು 'ಶ್ರೀರಾಮಕೃಷ್ಣ ವಚನವೇದ'ಕ್ಕೂ ಅನ್ವಯಿಸಬಹುದೇ? ಹಾಗೆ ಮಾಡಿದರೆ ನಮಗೆ ಸಿಕ್ಕುವ ನಾಲ್ಕು ಅನರ್ಘ್ಯ ರತ್ನಗಳು ಯಾವುವು? ಪ್ರತಿಯೊಬ್ಬ ಭಕ್ತನೂ ತನ್ನ ಮನೋಧರ್ಮಕ್ಕೆ, ಅಧ್ಯಯನದ ಗಹನತೆಗೆ ಅನುಗುಣವಾಗಿ ಶ್ರೀರಾಮಕೃಷ್ಣರ ಬೋಧನೆಗಳಿಂದ ಮಹಾವಾಕ್ಯಗಳನ್ನು ಹೆಕ್ಕಿಕೊಳ್ಳಬಹುದು. ಅವುಗಳನ್ನು ನೆನಪಿನಲ್ಲಿ ಇಟ್ಟುಕೊಂಡು, ಅವುಗಳ ಬೆಳಕಿನಲ್ಲಿ ಬದುಕನ್ನು ನಡೆಸಬಹುದು. ಅಂತಹ ಒಂದು ಸಣ್ಣ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಇದರ ಉದ್ದೇಶ ಶಾಸ್ತ್ರೀಯವಾದುದಲ್ಲ. ಸಾಮಾನ್ಯ ಭಕ್ತರಾದ ನಮಗೆ ಶ್ರೀರಾಮಕೃಷ್ಣರ ಬೋಧನೆಗಳನ್ನು ಮತ್ತೆ ಮತ್ತೆ ಸ್ಮರಣೆಗೆ

ತಂದುಕೊಳ್ಳಲು ಸುಲಭವಾದ ಒಂದು ಸೌಕರ್ಯವನ್ನು ಒದಗಿಸುವುದು. ಆ ಮೂಲಕ ಗುರುದೇವರ ಬೋಧನೆಗಳನ್ನು ದಿನನಿತ್ಯದ ಆಚರಣೆಗೆ ತರುವ ಪ್ರೇರಣೆಯನ್ನು ಪಡೆದುಕೊಳ್ಳುವುದಕ್ಕೆ ಸ್ವಲ್ಪವಾದರೂ ನೆರವಾಗುವುದು. ಇನ್ನು ಶ್ರೀರಾಮಕೃಷ್ಣರ ಮಹಾವಾಕ್ಯಗಳು ಯಾವುವು ಎನ್ನುವುದನ್ನು ನೋಡೋಣ.

**ಆಧ್ಯಾತ್ಮಿಕ ಸೌಧ :** ನಾವು ಒಂದು ಮನೆಯನ್ನು ಕಟ್ಟುತ್ತಿದ್ದೇವೆ ಎಂದುಕೊಳ್ಳೋಣ. ಮೊದಲ ಹಂತವಾಗಿ ಅಡಿಪಾಯ ನಿರ್ಮಿಸುತ್ತೇವೆ. ಅನಂತರ ಗೋಡೆಗಳು, ಆಮೇಲೆ ಬಾಗಿಲು, ಕಿಟಕಿಗಳು. ಹಾಗೆಯೇ ನಮ್ಮ ಆಧ್ಯಾತ್ಮಿಕ ಸೌಧವನ್ನೂ ನಾವು ನಿರ್ಮಿಸಿಕೊಳ್ಳಬೇಕು. ಸಿಮೆಂಟ್, ಇಟ್ಟಿಗೆಗಳಿಂದ ಕಟ್ಟಿದ ಮನೆಗಿಂತಲೂ, ಜೀವನವನ್ನು ಕಟ್ಟಿಕೊಳ್ಳುವುದು ಅತಿ ಮುಖ್ಯ. ಅದರಲ್ಲೂ ಆಧ್ಯಾತ್ಮಿಕ ಸೌಧವನ್ನಾಗಿ ಅದನ್ನು ನಿರ್ಮಾಣಮಾಡುವುದು ಇನ್ನೂ ಮುಖ್ಯ. ಇದಕ್ಕೆ ಶ್ರೀರಾಮಕೃಷ್ಣರು ನಮಗೆ ಸಹಾಯ ಮಾಡುತ್ತಾರೆ. ಹಂತ ಹಂತವಾಗಿ ಆಧ್ಯಾತ್ಮಿಕ ಸೌಧವನ್ನು ಕಟ್ಟಿಕೊಳ್ಳಲು ನೆರವಾಗುತ್ತಾರೆ.

ಆಧ್ಯಾತ್ಮಿಕ ಸೌಧದ ಮೊದಲ ಹಂತವೇ **ನೈತಿಕ ನಿಷ್ಠೆ**. ಎರಡನೆಯದು **ತ್ಯಾಗ–ವೈರಾಗ್ಯ**. ಮೂರನೆಯದು **ಭಗವಂತನಲ್ಲಿ ಅನುರಾಗ.** ನಾಲ್ಕನೆಯದು **ಸರ್ವತ್ರ ಭಗವಂತನ ಸಾನ್ನಿಧ್ಯವನ್ನು ಭಾವಿಸುವುದು.** ಈ ನಾಲ್ಕು ಹಂತಗಳಿಗೆ ಸರಿಸಮನಾಗಿ ಶ್ರೀರಾಮಕೃಷ್ಣರ ನಾಲ್ಕು ಸಂದೇಶಗಳನ್ನು ನಾವು ಅಧ್ಯಯನ ಮಾಡಬಹುದು. ಹೀಗೆ ಆಧ್ಯಾತ್ಮಿಕ ಜೀವನದ ಸಾರಸರ್ವಸ್ವವನ್ನು ಅವರ ಮೂಲಕ ಅರಿಯಬಹುದು.

**ಮನ್ ಮುಖ ಏಕ್ ಕೊರಾ :** ಆಧ್ಯಾತ್ಮಿಕ ಸೌಧವನ್ನು ನೈತಿಕತೆಯ ಅಡಿಪಾಯದ ಮೇಲೆ ಕಟ್ಟಬೇಕು. ಮನೆಯೊಂದರ ಅಡಿಪಾಯ ಕಣ್ಣಿಗೆ ಕಾಣಿಸುವುದಿಲ್ಲ. ಅದನ್ನು ನಾವು ಉಪಯೋಗಿಸುವುದೂ ಇಲ್ಲ. ಆದರೆ ಅದು ಎಷ್ಟು ಮುಖ್ಯವೆಂಬುದು ನಮಗೆಲ್ಲ ಗೊತ್ತು. ಅದೇ ರೀತಿ, ನೈತಿಕ ಪ್ರಜ್ಞೆ ನಮ್ಮಲ್ಲಿ ಜಾಗೃತವಾದಾಗ ಮಾತ್ರ ಅಧ್ಯಾತ್ಮದ ಅರಿವು ಅಂತರಾಳದಿಂದ ಹೊರಹೊಮ್ಮುವುದು. ಹಾಗೆಂದೇ ಸರಳ, ಪ್ರಾಯೋಗಿಕ ನೈತಿಕ ಆಚರಣೆಯನ್ನು ಎಲ್ಲ ಸಂತರೂ ಮಹಾತ್ಮರೂ ಬೋಧಿಸುವುದು. ಆಧ್ಯಾತ್ಮಿಕ ಜ್ಞಾನಕ್ಕೆ ಪೂರ್ವಭಾವಿಯಾಗಿ ದೇಹ, ಮನಸ್ಸು, ಬುದ್ಧಿಗಳು ಶುದ್ಧವಾಗಿರುವುದು, ಕಲ್ಮಶರಹಿತವಾಗಿರುವುದು ತುಂಬ ಅವಶ್ಯಕ. ಆಧ್ಯಾತ್ಮಿಕ ಸಾಧನೆಗೆ ದೇಹ ಸಮರ್ಥವಾಗಿರಬೇಕು. ಮನಸ್ಸು ಸೂಕ್ಷ್ಮ ವಿಷಯಗಳನ್ನು ಅರ್ಥಮಾಡಿಕೊಳ್ಳುವ ಏಕಾಗ್ರತೆಯನ್ನು ಹೊಂದಿರಬೇಕು. ಹಾಗೆಯೇ ಬುದ್ಧಿಯು ಆಧ್ಯಾತ್ಮಿಕ ಸತ್ಯಗಳನ್ನು ವಿಶ್ಲೇಷಿಸಿ, ಅರಗಿಸಿಕೊಳ್ಳುವ ಶಕ್ತಿಯನ್ನು ಪಡೆದಿರಬೇಕು. ಇದಕ್ಕೆಲ್ಲ ಮುಖ್ಯವಾಗಿ ಬೇಕಾದುದು ನೈತಿಕತೆ. ಸ್ವಾಮಿ ವಿವೇಕಾನಂದರು ಹೇಳುವಂತೆ ನೈತಿಕತೆ ತನಗೆ ತಾನೇ ಬಾಳಿನಲ್ಲಿ ಸಾರ್ಥಕತೆಯನ್ನು ತಂದುಕೊಡಲಾರದು. ಆದರೆ ಮುಂದಿನ ಆಧ್ಯಾತ್ಮಿಕ ಹಂತಕ್ಕೆ ಅದು ನಮ್ಮ ವ್ಯಕ್ತಿತ್ವವನ್ನು ಸಿದ್ಧಮಾಡಿಕೊಡುವುದು. ನಾವು ಉನ್ನತ ಜೀವನವನ್ನು ಬದುಕಬೇಕು ಹಾಗೂ ಜೀವನವನ್ನು ಅರ್ಥಪೂರ್ಣವನ್ನಾಗಿ ಪರಿವರ್ತಿಸಿಕೊಳ್ಳಬೇಕು. ಅದಕ್ಕಾಗಿ ಬೇಕಾದ ಅಸ್ತಿಭಾರವನ್ನು ನೈತಿಕತೆಯು ಒದಗಿಸಿಕೊಡುತ್ತದೆ.

ನೈತಿಕತೆಯು ನಮ್ಮ ನಡವಳಿಕೆಗಳ ಮೂಲಕ ವ್ಯಕ್ತವಾಗುತ್ತದೆ. ಆದರೆ ಅದರ ತಾಯಿಬೇರು ಅಥವಾ ಜೀವಾಳವೆಂದರೆ, ಸತ್ಯನಿಷ್ಠೆ. "ನುಡಿದಂತೆ ನಡೆದವನ ಅಡಿಗೆನ್ನ ನಮನ" ಎಂಬ ಸಾಲುಗಳಲ್ಲಿ, ಒಬ್ಬ ಕವಿಯು ಮಹಾತ್ಮರೊಬ್ಬರಿಗೆ ತನ್ನ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತಾನೆ. ಶ್ರೀರಾಮಕೃಷ್ಣರ ನೈತಿಕ ಪ್ರಜ್ಞೆ ಮತ್ತು ಆಚರಣೆ ಅದಕ್ಕಿಂತಲೂ ಉನ್ನತಮಟ್ಟದ್ದಾಗಿತ್ತು. ಅವರು 'ನಡೆದಂತೆ ನುಡಿದರು'; ತಮ್ಮ ಜೀವನದಲ್ಲಿ ತಾವು ನಿಜವಾಗಲೂ ಕಂಡುಕೊಂಡದ್ದನ್ನೇ, ಅನುಭವಿಸಿದ್ದನ್ನೇ ಇತರರಿಗೆ ಬೋಧಿಸಿದರು.

ನಮ್ಮ ಮನಸ್ಸು ಚಿಂತಿಸಿದ್ದನ್ನೇ ನಾವು ಮಾತನಾಡುತ್ತೇವೆಯೇ? ನಾವು ಮಾತನಾಡಿದ್ದನ್ನು ಕಾರ್ಯರೂಪಕ್ಕೆ ತರುತ್ತೇವೆಯೇ? ನಮ್ಮ ಮನಸ್ಸು, ಮಾತು, ಆಚರಣೆ – ಇವುಗಳಲ್ಲಿ ಅದೆಷ್ಟು ವೈಪರೀತ್ಯವಿದೆ! ಇದರಿಂದಲೇ ನಾವು ಮಾನಸಿಕ ಒತ್ತಡಗಳಿಂದ, ದ್ವೇಷ, ಅಸೂಯೆ, ವಿರೋಧಾಭಾಸಗಳಿಂದ ಬಳಲುತ್ತೇವೆ; ನೊಂದು ಬೆಂದು ಜೀರ್ಣವಾಗಿ ಹೋಗುತ್ತೇವೆ. ಮನಸ್ಸು, ಮಾತು ಮತ್ತು ಕೃತಿಗಳಲ್ಲಿ ಸಾಮರಸ್ಯವನ್ನು ಸಾಧಿಸುವುದೇ ಸತ್ಯನಿಷ್ಠೆ. ಸತ್ಯವೆಂದರೆ ಯಥಾರ್ಥವಾಗಿರುವುದು; ಯಾವತ್ತೂ ಬದಲಾವಣೆಯಾಗದಿರುವುದು. ಲೌಕಿಕ ಸ್ತರದಲ್ಲಿಯೇ ಇದನ್ನು ಸಾಧಿಸಲು ನಮಗೆ ಅಸಾಧ್ಯವಾದರೆ, ಅಲೌಕಿಕ ಸತ್ಯವು ಎಂದೂ ನಮ್ಮ ಅರಿವಿಗೆ ಬರುವುದಿಲ್ಲ. ಉಪನಿಷತ್ತು ಭಗವಂತನನ್ನು **ಸತ್ಯಸ್ಯ ಸತ್ಯ** ಎಂದು ಕರೆಯುತ್ತದೆ. ಇದರ ಅರ್ಥ, ನಮ್ಮ ಕಣ್ಣಿಗೆ ಸತ್ಯದಂತೆ ಕಾಣುವ ಈ ಜಗತ್ತಿನ ಹಿನ್ನೆಲೆಯಲ್ಲಿರುವ ಪಾರಮಾರ್ಥಿಕ ಸತ್ಯ ಎಂದು. ಹೀಗಾಗಿ ಮಾಯಾರೂಪವಾದ ಈ ಜಗತ್ತಿನ ಪರಿಧಿಯೊಳಗೇ, ಸಾಪೇಕ್ಷವಾದ ಸತ್ಯಭಾವವನ್ನು ನಾವು ಸಾಧಿಸಿಕೊಳ್ಳಲು ಆಗದಿದ್ದರೆ, ಅದನ್ನು ಮೀರಿದ ನಿತ್ಯಸತ್ಯವನ್ನು ಗ್ರಹಿಸುವುದಾದರೂ ಹೇಗೆ? ಅದಕ್ಕೆ ನಮಗೆ ಯೋಗ್ಯತೆಯಾದರೂ ಹೇಗೆ ಬರುತ್ತದೆ?

ಇದಕ್ಕಾಗಿಯೇ ಭಗವಂತನನ್ನು ಕಾಣುವುದಕ್ಕೆ ಮೊದಲ ಹಂತವಾಗಿ ಭಾವಶುದ್ಧಿಯನ್ನು ಶ್ರೀರಾಮಕೃಷ್ಣರು ಉಪದೇಶಿಸುತ್ತಾರೆ; "ಭಾವರಾಜ್ಯದಲ್ಲಿ ಕಳ್ಳತನ ಮಾಡಿಕೊಳ್ಳಕೂಡದು" ಎಂದು ಸಾಧಕರಿಗೆ ಎಚ್ಚರಿಕೆ ಕೊಡುತ್ತಾರೆ. ಇದನ್ನು ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತರುವ ವಿಧಾನವೆಂದರೆ, ಅವರೇ ಹೇಳುವಂತೆ, **ಮನ್ ಮುಖ ಏಕ್ ಕೊರಾ** – ಮನಸ್ಸು ಮತ್ತು ಮಾತನ್ನು ಒಂದೇ ಆಗಿ ಮಾಡಿಕೊಳ್ಳುವುದು. ಮನೋವೈಜ್ಞಾನಿಕವಾಗಿಯೂ ಇದು ಅತ್ಯಂತ ಅವಶ್ಯಕ. ಪಾಶ್ಚಾತ್ಯ ಮನೋವಿಜ್ಞಾನದ ಪ್ರಕಾರ, ಮನುಷ್ಯನ ವ್ಯಕ್ತಿತ್ವದಲ್ಲಿ ಎರಡು ಹಂತಗಳ ಪ್ರಜ್ಞೆಯನ್ನು ಕಾಣುತ್ತೇವೆ. ಒಂದು **ಜ್ಞಾತ**, ಇನ್ನೊಂದು **ಅಜ್ಞಾತ**. ಜ್ಞಾತ ಮತ್ತು ಅಜ್ಞಾತ ಪ್ರಜ್ಞೆಗಳ

ಸಾಮರಸ್ಯದ ಕೊರತೆಯೇ ಎಲ್ಲ ರೀತಿಯ ಮಾನಸಿಕ ವ್ಯಾಧಿಗಳಿಗೆ, ಸಂಕಷ್ಟಗಳಿಗೆ ಮೂಲಕಾರಣ. ಇಲ್ಲಿ ಅಜ್ಞಾತಪ್ರಜ್ಞೆಯನ್ನು ಶ್ರೀರಾಮಕೃಷ್ಣರು ಹೇಳುವ ಮನಸ್ಸಿಗೆ ಹೋಲಿಸಬಹುದು. ಜ್ಞಾತವನ್ನು ಮಾತಿಗೆ ಹೋಲಿಸಬಹುದು. ಶ್ರೀರಾಮಕೃಷ್ಣರ ವಾಕ್ಯದಲ್ಲಿ ಬರುವ 'ಮನಸ್ಸು' ಮತ್ತು 'ಮಾತು' – ಇವುಗಳಿಗೆ ವಾಚ್ಯಾರ್ಥ ಮತ್ತು ಲಕ್ಷ್ಯಾರ್ಥಗಳೆರಡನ್ನೂ ನಾವು ಕಲ್ಪಿಸಬಹುದು. ವಾಚ್ಯಾರ್ಥದ ದೃಷ್ಟಿಯಿಂದ ನೋಡುವುದಾದರೆ, ಮನಸ್ಸು ಮತ್ತು ಮಾತು ಒಂದೇ ಆಗಿರಬೇಕು ಎಂಬ ಸಾಮಾನ್ಯ ಅರ್ಥ ಹೊರಹೊಮ್ಮುತ್ತದೆ. ಲಕ್ಷ್ಯಾರ್ಥದ ದೃಷ್ಟಿಯಲ್ಲಿ ನೋಡುವುದಾದರೆ, ಮನಸ್ಸು ಎನ್ನುವುದು ನಮ್ಮ ಅಜ್ಞಾತಪ್ರಜ್ಞೆಯ ಸಂಕೇತ; ಮಾತು ಎನ್ನುವುದು ಜ್ಞಾತ ಪ್ರಜ್ಞೆಯ ಸಂಕೇತ. ಅವುಗಳು ಒಂದೇ ಆಗಿದ್ದರೆ, ಪರಸ್ಪರ ಪೂರಕವಾಗಿದ್ದರೆ, ಅಲ್ಲಿ ವ್ಯಕ್ತಿತ್ವವು ಏಕರೂಪದ್ದಾಗಿರುತ್ತದೆ, ಅಖಂಡ ವಾಗಿರುತ್ತದೆ. ವ್ಯಕ್ತಿತ್ವದ ಭಿನ್ನತೆ ಅಲ್ಲಿ ಕಂಡುಬರುವುದಿಲ್ಲ; ವಿರೋಧಾಭಾಸ, ವೈಪರೀತ್ಯಗಳಿಗೆ ಅಲ್ಲಿ ಅವಕಾಶವಿರುವುದಿಲ್ಲ. ಆಗ ಮನಸ್ಸು ಶಾಂತ ಹಾಗೂ ಪರಿಶುದ್ಧ ಸ್ಥಿತಿಯಲ್ಲಿ ಇರುತ್ತದೆ. ಇದನ್ನೇ ಭಗವದ್ಗೀತೆಯು 'ಸತ್ವಸಂಶುದ್ಧಿ' ಎಂದು ಕರೆದಿದೆ; ದೈವೀಗುಣ ಗಳಲ್ಲಿ ಒಂದನ್ನಾಗಿ ಪರಗಣಿಸಿದೆ. **ಸತ್ವಶುದ್ಧಿಃ ಸತ್ವಸ್ಯ ಅಂತಃಕರಣಸ್ಯ ಸಂಶುದ್ಧಿಃ ಸಂವ್ಯವಹಾರೇಷು ಪರವಂಚನಮಾಯಾನೃತಾದಿ ಪರಿವರ್ಜನಮ್ । ಶುದ್ಧಸತ್ವಭಾವೇನ ವ್ಯವಹಾರಃ ಇತ್ಯರ್ಥಃ** – ಸತ್ವದ ಅಥವಾ ಅಂತಃಕರಣದ ಶುದ್ಧಿಯೇ ಸತ್ವಸಂಶುದ್ಧಿ. ನಡೆನುಡಿ ಗಳಲ್ಲಿ ಇತರರನ್ನು ಮೋಸಗೊಳಿಸುವುದು, ಕಪಟತನ, ಸುಳ್ಳು ಮುಂತಾದವುಗಳನ್ನು ಬಿಟ್ಟಿರುವುದು, ಶುದ್ಧಸತ್ವದಿಂದ ಕೂಡಿದ ಮನೋಭಾವದಿಂದ ವ್ಯವಹರಿಸುವುದು ಎಂದರ್ಥ – ಇದು ಶ್ರೀಶಂಕರಾಚಾರ್ಯರು 'ಸತ್ವಸಂಶುದ್ಧಿ' ಎನ್ನುವ ಪದಕ್ಕೆ ನೀಡುವ ಸೊಗಸಾದ ವಿವರಣೆ (ಭಗವದ್ಗೀತೆ, ೧೬–೧ ರ ಶ್ಲೋಕದ ಭಾಷ್ಯ).

**ಸತ್ಯಮೇವ ಜಯತೇ ನಾನೃತಂ ಸತ್ಯೇನ ಪಂಥಾ ವಿತತೋ ದೇವಯಾನಃ । ಯೇನಾಕ್ರಮಂತ್ಯೃಷಯೋ ಹ್ಯಾಪ್ತಕಾಮಾ ಯತ್ರ ತತ್ ಸತ್ಯಸ್ಯ ಪರಮಂ ನಿಧಾನಮ್ ॥** – "ಸತ್ಯವೇ ಜಯಿಸುತ್ತದೆ, ಸುಳ್ಳಲ್ಲ. ಸತ್ಯದ ಈ ಪರಮ ಸಂಪತ್ತು ಇರುವಲ್ಲಿ ಆಪ್ತಕಾಮರಾದ ಋಷಿಗಳು ಯಾವ ಮಾರ್ಗದಿಂದ ಹೋಗುತ್ತಾರೋ, ಅಂತಹ ದೇವಯಾನವೆಂಬ ದಾರಿಯು ಸತ್ಯದಿಂದಲೇ ಹರಡಿರುತ್ತದೆ" (ಮುಂಡಕೋಪನಿಷತ್ತು, ೧–೩–೬). ಉಪನಿಷತ್ತಿನ ಈ ಮಾತು ಎರಡು ಸಂಗತಿಗಳನ್ನು ಸ್ಪಷ್ಟಪಡಿಸುತ್ತದೆ. ಒಂದನೆಯದು ಪರತತ್ತ್ವ ವೆಂಬುದು ಸತ್ಯಸ್ವರೂಪವಾದದ್ದು ಎನ್ನುವುದು. ಎರಡನೆಯದು ಅದನ್ನು ಸೇರುವ ಮಾರ್ಗ ಕೂಡ ಸತ್ಯದಿಂದ ಆವೃತವಾಗಿದೆ ಎನ್ನುವುದು. ಸ್ವಾಮಿ ವಿವೇಕಾನಂದರು, ಸಾಧ್ಯ ಅಥವಾ ಗುರಿಗೆ ನಾವು ಎಷ್ಟು ಮಹತ್ವ ಕೊಡುತ್ತೇವೆಯೋ, ಅಷ್ಟೇ ಮಹತ್ವವನ್ನು ಅದನ್ನು ಪಡೆದುಕೊಳ್ಳುವ ವಿಧಾನಕ್ಕೂ ನೀಡಬೇಕು ಎನ್ನುತ್ತಾರೆ. ನಮಗೆ ಸತ್ಯವೇ ಗುರಿಯಾಗಿದ್ದರೆ, ನಾವು ಸತ್ಯಮಾರ್ಗವನ್ನೇ ತಳೆಯ ಬೇಕು. ಅಸತ್ಯವಾದ ಮಾರ್ಗದಿಂದ ನಿತ್ಯಸತ್ಯವು ಎಂದೂ ದೊರೆಯುವುದಿಲ್ಲ. ಅದಕ್ಕಾಗಿ ಮನಸ್ಸು ಮತ್ತು ಮಾತುಗಳಲ್ಲಿ ಏಕರೂಪತೆ ಇರಲೇಬೇಕು. ಇದೇ ಶ್ರೀರಾಮಕೃಷ್ಣರು ಬೋಧಿಸುವ ವಾಸ್ತವದೃಷ್ಟಿಯ ಉಪದೇಶ.

**ಕಾಮಿನಿ ಕಾಂಚನ ತ್ಯಾಗ :** ಭಾವಸಂಶುದ್ಧಿಯ ಜೊತೆಜೊತೆಯಲ್ಲಿಯೇ ಸಾಗಬೇಕಾದದ್ದು ತ್ಯಾಗ. ತ್ಯಾಗ ಮತ್ತು ಭಾವಸಂಶುದ್ಧಿಗಳು ಪರಸ್ಪರ ಪೂರಕ. ಒಂದನ್ನು ಬಿಟ್ಟು ಮತ್ತೊಂದು ಇರಲಾರವು. ಹೀಗಾಗಿ ತ್ಯಾಗಭಾವನೆಗೆ ಶ್ರೀರಾಮಕೃಷ್ಣರು ಮಹತ್ವವನ್ನು ಕೊಟ್ಟಿದ್ದಾರೆ. ಅದರಲ್ಲೂ ಕಾಮಿನಿ, ಕಾಂಚನ – ಈ ಎರಡರ ತ್ಯಾಗವೇ ನಿಜವಾದ ತ್ಯಾಗ ಎಂದು ಅವರು ಮಾತುಮಾತಿಗೂ ಒತ್ತಿ ಹೇಳುತ್ತಾರೆ.

ಇದನ್ನು ಅರ್ಥಮಾಡಿಕೊಳ್ಳುವುದು ಹೇಗೆ? ನಮ್ಮ ಅಂತರಂಗವನ್ನು ವಿಶ್ಲೇಷಿಸಿ ನೋಡಿಕೊಂಡರೆ, ನಮ್ಮ ಎಲ್ಲ ಕೆಲಸಗಳಿಗೆ ಪ್ರೇರಣೆಯನ್ನು ನೀಡುವುದು ಕಾಮನೆ ಅಥವಾ ಆಸೆ ಎನ್ನುವುದು ಗೊತ್ತಾಗುತ್ತದೆ. ಅಂತಹ ಆಸೆಗಳು ನೂರಾರು ಬಗೆಯ ದಾಗಿರಬಹುದು. ಆದರೆ ಆ ಆಸೆಗಳ ಹಿಂದೆ ಮತ್ತೊಂದು ಮೂಲ ಆಸೆ ಇರುತ್ತದೆ. ಅಂತಹ ಹತ್ತುಹಲವು ಪ್ರಾಥಮಿಕ ಆಸೆಗಳ ಹಿನ್ನೆಲೆ ಯಲ್ಲಿ, ಕಾಮ ಮತ್ತು ಲೋಭಗಳೇ ಕೆಲಸಮಾಡುತ್ತಿರುವುದನ್ನು ನಾವು ಸ್ಪಷ್ಟವಾಗಿ ಗಮನಿಸಬಹುದು. ಕಾಮಭೋಗಾಸಕ್ತಿ, ಧನಾಕಾಂಕ್ಷೆ – ಈ ಎರಡು ಮೂಲಭೂತ ಬಯಕೆಗಳೇ ಆಲದ ಮರದಂತೆ ನೂರಾರು ಕವಲುಗಳಾಗಿ, ನೂರಾರು ಬಗೆಯ ಆಸೆಗಳಾಗಿ ನಮ್ಮ ಮನಸ್ಸನ್ನು ಆವರಿಸಿರುತ್ತವೆ.

ಇದನ್ನು ಪಾಶ್ಚಾತ್ಯ ಮನೋವಿಜ್ಞಾನವೂ ತಕ್ಕಮಟ್ಟಿಗೆ ಒಪ್ಪಿಕೊಳ್ಳುತ್ತದೆ. ಸಿಗ್ಮಂಡ್ ಫ್ರಾಯ್ಡ್ ಪಾಶ್ಚಾತ್ಯ ಮನೋವಿಜ್ಞಾನದ ಪಿತಾಮಹ. ಕಾಮಾಸಕ್ತಿಯೇ ಮನುಷ್ಯನ ಮೂಲಭೂತ ಪ್ರಚೋದನಾತ್ಮಕ ಶಕ್ತಿ ಎಂದು ಅವನು ಹೇಳುತ್ತಾನೆ. ಅದನ್ನು ಒಪ್ಪಿಕೊಂಡು, ಪೂರೈಸಿಕೊಳ್ಳುವುದೇ ಸುಖೀ ಜೀವನಕ್ಕೆ ಎಡೆಮಾಡಿಕೊಡುವುದು ಎಂದು ಅವನು ಪ್ರತಿಪಾದಿಸುತ್ತಾನೆ. ಈ ಕಾಮಾಸಕ್ತಿಯನ್ನು ಪೂರೈಸಿಕೊಳ್ಳದಿರುವುದೇ ಮಾನಸಿಕ ವ್ಯಾಧಿಗಳಿಗೆ ಕಾರಣ ಎಂದು ಅವನು ಅಭಿಪ್ರಾಯಪಡುತ್ತಾನೆ. ಮನುಷ್ಯನಲ್ಲಿ ಈ ಬಗೆಯ ಅಪೂರ್ಣಭಾವನೆ ಬರುವುದು ತನ್ನ ನೈಜ ಸ್ವಭಾವದ ಅಜ್ಞಾನದಿಂದ ಎಂದು ಭಾರತೀಯ ಮನೋವಿಜ್ಞಾನವು ಹೇಳುತ್ತದೆ. ಇದನ್ನೇ ಅವಿದ್ಯೆಯ ಸ್ಥಿತಿ ಎಂದು ಬಣ್ಣಿಸುತ್ತದೆ. ಪರಿಪೂರ್ಣವಾಗಿರುವ ತನ್ನ ವ್ಯಕ್ತಿತ್ವದ ಯಥಾರ್ಥ ಸ್ವರೂಪವನ್ನು ತಿಳಿದುಕೊಳ್ಳುವುದೇ ಒಬ್ಬ ಮನುಷ್ಯನಲ್ಲಿ ಸಾರ್ಥಕತೆಯ ಭಾವನೆಯನ್ನು ಮೂಡಿಸಬಲ್ಲುದು ಎಂದು ಅದು ಪ್ರತಿಪಾದಿಸುತ್ತದೆ. ಅಂತಹ ಸ್ವರೂಪ ಅತೀಂದ್ರಿಯ ವಾಗಿದ್ದು, ಚೈತನ್ಯಾತ್ಮಕವಾಗಿದೆ ಎಂದು ಬೋಧಿಸುತ್ತದೆ.

ಲೋಭ ಎನ್ನುವುದು ಒಂದು ಬಗೆಯ ಅವಾಸ್ತವ ದೃಷ್ಟಿ. ಮನೋವೈಜ್ಞಾನಿಕ ಭಾಷೆಯಲ್ಲಿ ಇದನ್ನು 'ಅಸಮಂಜಸ ನಿರೀಕ್ಷೆ' (inappropriate expectation) ಎಂದು ಕರೆಯಬಹುದು. ಒಬ್ಬ ವ್ಯಕ್ತಿಯು ತನ್ನ ಅಗತ್ಯ ಮತ್ತು ಅರ್ಹತೆಗೆ ಮೀರಿದ ಹಣ

ಅಥವಾ ಸಂಪತ್ತನ್ನು ಗಳಿಸುವ ಮಿತಿಮೀರಿದ ಬಯಕೆಯನ್ನು ಇದು ಸಂಕೇತಿಸುತ್ತದೆ. ಪ್ರಖ್ಯಾತ ಪಾಶ್ಚಾತ್ಯ ದಾರ್ಶನಿಕನಾದ ಥಾಮಸ್ ಅಕ್ವಿನಾಸ್ ಲೋಭವನ್ನು ಭಗವಂತನ ವಿರುದ್ಧ ಎಸಗುವ ಪಾಪವೆಂದು ಬಣ್ಣಿಸುತ್ತಾನೆ; ಅನಿತ್ಯವಾದ ವಸ್ತುಗಳ ಸಲುವಾಗಿ ಮನುಷ್ಯನು ಶಾಶ್ವತವಾದ ಸಂಗತಿಗಳನ್ನು ಕಡೆಗಣಿಸುವ ಪಾಪಗಳಷ್ಟೇ ಇದೂ ಕೆಡುಕಾದುದು ಎಂದು ಅಭಿಪ್ರಾಯಪಡುತ್ತಾನೆ. ಲೋಭದ ಹಿಂದೆ ಇರುವ ಉದ್ದೇಶವೇನೂ ಕೆಡುಕಾದುದಲ್ಲ. **ಸುರಕ್ಷತೆ, ಸ್ವಾತಂತ್ರ್ಯ** ಮತ್ತು **ಸುಖ** – ಇವುಗಳೇ ಅದಕ್ಕೆ ಪ್ರಚೋದನೆ ನೀಡುವ ಗುರಿಗಳು. ಆದರೆ ಧನಸಂಚಯದಲ್ಲಿ ಮಾತ್ರವೇ ಮೇಲಿನವು ದೊರಕುತ್ತವೆ ಎಂಬ ತಪ್ಪುಭಾವನೆಯಿಂದ ಒಬ್ಬ ವ್ಯಕ್ತಿ ಲೋಭಿಯಾಗುತ್ತಾನೆ. ತನ್ನಲ್ಲಿ ಇಲ್ಲದುದುದ್ದಾಗಿ ಎಣೆಯಿಲ್ಲದ ದಾಹ, ತನ್ನಲ್ಲಿ ಇರುವುದನ್ನು ಕಾಪಾಡಿಕೊಳ್ಳುವಲ್ಲಿ ಮಿತಿಮೀರಿದ ಲಕ್ಷ್ಯ – ಇವು ಲೋಭದ ಎರಡು ಪ್ರಮುಖ ಲಕ್ಷಣಗಳು. ಇದರಿಂದಾಗಿ ತನ್ನ ಮನದಾಳದಲ್ಲಿರುವ ಮೂಲಭೂತ ಉದ್ದೇಶಗಳಿಂದ ಮನುಷ್ಯ ಬಹುದೂರ ಸರಿಯುತ್ತಾನೆಯೇ ಹೊರತು, ಅವುಗಳ ಬಳಿಗೆ ಕಿಂಚಿತ್ತಾದರೂ ಸಾಗುವುದಿಲ್ಲ. ಸುರಕ್ಷತೆಯನ್ನು ಕಂಡುಕೊಳ್ಳಲು ಹೋಗಿ, ಲೋಭಿಯು ಅಸ್ಥಿರ ಮತ್ತು ಅಸುರಕ್ಷಿತನಾಗುತ್ತಾನೆ. ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಹೋಗಿ ಅವನು ಹಣ ಮತ್ತು ಸಂಪತ್ತಿನ ದಾಸನಾಗುತ್ತಾನೆ. ಸುಖವನ್ನು ಅರಸಲು ಹೊರಟವನು, ಮಾನಸಿಕ ಒತ್ತಡ ಮತ್ತು ಚಂಚಲತೆಗಳಿಂದ ಬಳಲುತ್ತಾನೆ.

ಕಾಮ ಮತ್ತು ಲೋಭ – ಇವುಗಳನ್ನು 'ಕಾಮಿನಿ' ಮತ್ತು 'ಕಾಂಚನ' ಎಂಬ ಪದಗಳ ಮೂಲಕ ಶ್ರೀರಾಮಕೃಷ್ಣರು ಸೂಚಿಸುತ್ತಿದ್ದಾರೆ. ಮಾನವನಲ್ಲಿ ಹುದುಗಿರುವ ಅಮೂರ್ತವಾದ ಈ ಆವೇಗಗಳಿಗೆ ಮೂರ್ತರೂಪದ ಸಂಕೇತಗಳನ್ನು ಈ ಮೂಲಕ ಅವರು ನೀಡುತ್ತಿದ್ದಾರೆ. ಇದರೊಂದಿಗೆ ಆಧ್ಯಾತ್ಮಿಕ ಜೀವನದಲ್ಲಿ ಎದುರಾಗುವ ಎರಡು ಮುಖ್ಯ ಆತಂಕಗಳನ್ನು ಸಾಧಕರಿಗೆ ಬೆರಳಿಟ್ಟು ತೋರಿಸುತ್ತಿದ್ದಾರೆ.

**ಈಶ್ವರೇ ಅನುರಾಗ್, ವಿಷಯೇ ವಿರಾಗ್** : ನೈಜಪ್ರೀತಿಯು ಆನಂದವನ್ನು ತಂದುಕೊಡಬೇಕು; ಸಾರ್ಥಕತೆಯ ಭಾವವನ್ನು ಮೂಡಿಸಬೇಕು; ವಿನಯ ಹಾಗೂ ನಿಃಸ್ವಾರ್ಥತೆಯಿಂದ ಕೂಡಿರಬೇಕು; ಪ್ರೀತಿಯಲ್ಲಿ ಯಾವ ಭಯ, ಆತಂಕಗಳೂ ಇರಬಾರದು. ಆದರೆ ಪ್ರಾಪಂಚಿಕ ಪ್ರೀತಿಯು ನ್ಯೂನತೆಗಳಿಂದ ಕೂಡಿರುತ್ತದೆ. ಹೀಗಾಗಿ ಅದರಿಂದ ದುಃಖ, ದ್ವೇಷ, ಭಯ ಮುಂತಾದ ನಕಾರಾತ್ಮಕ ಭಾವನೆಗಳೇ ಹೆಚ್ಚಾಗಿ ಹುಟ್ಟುತ್ತವೆ. ಹೀಗಾಗಿ ಅಂತಹ ಪ್ರೀತಿ ಮಧುರವಾದ ಅನುಭವವನ್ನು ನಮಗೆ ನೀಡುವ ಬದಲು, ಸಹಿಸಲು ಅಸಾಧ್ಯವಾದ ಸಂಕಷ್ಟವನ್ನು ಉಂಟುಮಾಡುತ್ತದೆ. ಇದರಿಂದ ದೂರಸರಿಯುವ, ತಪ್ಪಿಸಿಕೊಳ್ಳುವ ಎಲ್ಲ ಪ್ರಯತ್ನವೂ, ಮಾನವನ ದುರ್ಬಲತೆಯಿಂದಾಗಿ ವಿಫಲವಾಗುತ್ತದೆ. ಇದು ವಿಚಿತ್ರ ಸಂದಿಗ್ಧ ಸ್ಥಿತಿಯನ್ನು ಉಂಟುಮಾಡಿ, ಬದುಕನ್ನು ನರಕವಾಗಿಸುತ್ತದೆ.

ಇದಕ್ಕೆ ಪರಿಹಾರವೇನು? ಪ್ರೀತಿಯಿಂದ ವಂಚಿತರಾದ ನಾವು ಮಾಡಬೇಕಾದ ಮೊದಲ ಕೆಲಸವೆಂದರೆ, ನಿಜವಾದ ಪ್ರೀತಿ ಯಾವುದು ಎಂಬುದನ್ನು ಕಂಡುಕೊಳ್ಳುವುದು; ಹಂಬಲಿಸಿ ಆ ಪ್ರೀತಿಯನ್ನು ಪಡೆದುಕೊಳ್ಳುವುದು. ಪ್ರೀತಿ ಎನ್ನುವುದು ಒಂದು ಸಕಾರಾತ್ಮಕ ಧೋರಣೆ. ಇದು ತನ್ನ ನೈಜ ಸ್ವರೂಪವನ್ನು ಪಡೆದುಕೊಳ್ಳುವುದು, ತನ್ನ ಸ್ವಂತಿಕೆಯನ್ನು ಮರೆಯುವುದು ಭಗವತ್ಪ್ರೇಮದಲ್ಲಿ ಮಾತ್ರ. ಹಾಗೆಂದೇ ಶ್ರೀರಾಮಕೃಷ್ಣರು "ಭಗವಂತನಲ್ಲಿ ಅನುರಾಗವನ್ನು ಬೆಳೆಸಿಕೊಳ್ಳಿರಿ" ಎಂದು ಕರೆ ನೀಡುತ್ತಾರೆ. ಆಧ್ಯಾತ್ಮಿಕ ಜೀವನವೆಂದರೆ ಪ್ರಪಂಚದ ಬಗ್ಗೆ ನಕಾರಾತ್ಮಕ ಧೋರಣೆಯನ್ನು ಇಟ್ಟುಕೊಂಡಿರುವುದಲ್ಲ. ಅದಕ್ಕೆ ಬದಲಾಗಿ ಇಡೀ ಅಸ್ತಿತ್ವಕ್ಕೆ ಆಧಾರವಾದ ಭಗವಂತನಲ್ಲಿ ತುಂಬು ಪ್ರೇಮವನ್ನು, ತಾದಾತ್ಮ್ಯವನ್ನು ಬೆಳೆಸಿಕೊಳ್ಳುವುದು. ಇದು ಸಾಧ್ಯವಾದಾಗ ಮಾತ್ರ ಬದುಕು ಸಹ್ಯವಾಗುತ್ತದೆ, ಪ್ರಪಂಚವೆನ್ನುವುದು 'ಆನಂದಧಾಮ' ವಾಗುತ್ತದೆ.

ಪ್ರೀತಿಯಲ್ಲಿ ಆಕರ್ಷಣೆ ಎನ್ನುವುದು ಬಹುಮುಖ್ಯವಾದ ಅಂಶ. ನಾವು ಪ್ರೀತಿಸುವ ವ್ಯಕ್ತಿಯಲ್ಲಿ ಸಹಜವಾಗಿಯೇ ಆಕರ್ಷಿತರಾಗುತ್ತೇವೆ. ಪ್ರೀತಿಯ ಉತ್ಕಟತೆ, ತೀವ್ರತೆ ಹೆಚ್ಚಿದಂತೆಲ್ಲಾ ಆಕರ್ಷಣೆಯೂ ಅಧಿಕವಾಗುತ್ತಾ ಹೋಗುತ್ತದೆ. ಹಾಗೆಯೇ ಆ ವ್ಯಕ್ತಿಯಲ್ಲಿ ತಾದಾತ್ಮ್ಯತೆಯೂ ಬೆಳೆಯುತ್ತದೆ. ಭಗವಂತನಲ್ಲಿ ಹೆಚ್ಚು ಹೆಚ್ಚು ಭಕ್ತಿಯನ್ನು ಬೆಳೆಸಿಕೊಂಡರೆ, ಆತನಲ್ಲಿ ಹೆಚ್ಚು ಹೆಚ್ಚು ಆಕರ್ಷಿತರಾಗುತ್ತೇವೆ. ಮನಸ್ಸು ಭಗವದ್ಭಾವದಿಂದ ರಂಜಿತವಾಗುತ್ತದೆ. ಇದರಿಂದಾಗಿ ಸಹಜವಾಗಿಯೇ ಪ್ರಾಪಂಚಿಕ ಸಂಗತಿಗಳಲ್ಲಿ ಆಸಕ್ತಿ ಮತ್ತು ಆಕರ್ಷಣೆಗಳು ಕಡಮೆಯಾಗುತ್ತ ಬರುತ್ತವೆ. ಇದನ್ನೇ **ಈಶ್ವರೇ ಅನುರಾಗ್, ವಿಷಯೇ ವಿರಾಗ್** – 'ಭಗವಂತನಲ್ಲಿ ಅನುರಾಗ, ವಿಷಯವಸ್ತುಗಳಲ್ಲಿ ವೈರಾಗ್ಯ' ಎನ್ನುವ ಸರಳಸೂತ್ರದ ಮೂಲಕ ಶ್ರೀರಾಮಕೃಷ್ಣರು ಉಪದೇಶಿಸುತ್ತಾರೆ. "ಪ್ರಪಂಚಮುಖವಾಗಿರುವ ನಿಮ್ಮ ಪ್ರೀತಿಯ ದಿಕ್ಕನ್ನು ಬದಲಾಯಿಸಿ, ಅದನ್ನು ಭಗವಂತನೆಡೆಗೆ ಹರಿಯಬಿಡಿ. ಭಗವಂತನಿಗೆ ಹತ್ತಿರವಾಗುತ್ತ ಹೋದಹಾಗೆ ಪ್ರಪಂಚಾಸಕ್ತಿ ದೂರವಾಗುತ್ತ ಹೋಗುತ್ತದೆ" ಎನ್ನುವ ಆಶಯ ಅವರ ಈ ಬೋಧನೆಯಲ್ಲಡಗಿದೆ.

ಇದು ಸಾಧ್ಯವಾಗಬೇಕಾದರೆ, ನಮ್ಮ ಉದ್ದೇಶವನ್ನು ಸ್ಪಷ್ಟವಾಗಿರಿಸಿಕೊಂಡಿರಬೇಕು. 'ಯೋಗ ಭೋಗ ಸಮಯೋಗದ ದೃಷ್ಟಿ' ಎನ್ನುವುದು ಕವಿಯ ಕಾಲ್ಪನಿಕ ಲಹರಿಯೇ ಹೊರತು, ಆಧ್ಯಾತ್ಮಿಕ ಜೀವನದಲ್ಲಿ ಇದು ಸಾಧ್ಯವಾಗುವುದಿಲ್ಲ. ನಮ್ಮ ಜೀವನದ ಕೇಂದ್ರವಾಗಿ ಭಗವಂತನನ್ನು ಮಾಡಿಕೊಳ್ಳಬೇಕೆಂದು ನಾವು ತುಂಬು ಮನಸ್ಸಿನಿಂದ, ಪ್ರಾಮಾಣಿಕವಾಗಿ ಇಚ್ಛೆಸಿದರೆ, ಸಹಜವಾಗಿಯೇ ಭೋಗಾಸಕ್ತಿಯು ನಮ್ಮ ಮನಸ್ಸಿನಿಂದ ನಿಧಾನವಾಗಿಯಾದರೂ ಸರಿದುಹೋಗುವುದು. ಒಂದು ಇದ್ದರೆ, ಇನ್ನೊಂದಕ್ಕೆ ಎಡೆ ಇರುವುದಿಲ್ಲ. ಅವೆರಡೂ ಅವಶ್ಯಕ ಎಂಬ ಭ್ರಮೆ ಕಪಟತನಕ್ಕೆ ಎಡೆಮಾಡಿಕೊಡುತ್ತದೆ. ಹೀಗಾಗಿ ನಮ್ಮ ಜೀವನಾದರ್ಶ ಯಾವುದು ಎಂಬುದರಲ್ಲಿ ನಿಶ್ಚಯಭಾವನೆಯು ಅತ್ಯಂತ ಅವಶ್ಯಕ. ಶ್ರೀರಾಮಕೃಷ್ಣರ ಸರಳಸೂತ್ರವು ನಮಗೆ ಇದನ್ನೇ ಮನದಟ್ಟು ಮಾಡಿಕೊಡುತ್ತದೆ.